

## ‘ಐಒಎ’ದಲ್ಲಿ ಉಷೋದಯ



14

**ಭಾರತದ** ಅಥ್ಲೆಟಿಕ್ಸ್ ಕ್ಷೇತ್ರ ಕಂಡ ಮಹಾನ್ ತಾರೆ ಪಿ.ಟಿ. ಉಷಾ. ಕೇರಳದ ಈ ಹೆಣ್ಣುಮಗಳು ‘ಭಾರತೀಯ ಒಲಿಂಪಿಕ್ ಸಂಸ್ಥೆ’ (ಐಒಎ) ಚುಕ್ಕಾಣಿ ಹಿಡಿಯುವಂತಾದುದು ಕ್ರೀಡಾಕ್ಷೇತ್ರಕ್ಕೆ ಸಂಬಂಧಿಸಿದಂತೆ 2022ರ ಪ್ರಮುಖ ವಿದ್ಯಮಾನಗಳಲ್ಲೊಂದು. 95 ವರ್ಷಗಳ ‘ಐಒಎ’ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯೊಬ್ಬರು ಅಧ್ಯಕ್ಷ ಸ್ಥಾನಕ್ಕೆ ಏರಿದ್ದಾರೆ.

1984ರ ಒಲಿಂಪಿಕ್ಸ್‌ನಲ್ಲಿ, 400 ಮೀ ಹರ್ಡಲ್ಸ್ ಫೈನಲ್‌ನಲ್ಲಿ ನಾಲ್ಕನೇ ಸ್ಥಾನವನ್ನು ಗಳಿಸಿದ್ದುದು ಉಷಾ ಅವರ ಅತ್ಯುತ್ತಮ ಸಾಧನೆ. ‘ಭಾರತದ ಓಟದ ರಾಣಿ’ಯೆಂದೇ ಪ್ರಸಿದ್ಧರಾಗಿರುವ ಅವರು, 1986ರ ಸಿಯೋಲ್ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ 4 ಚಿನ್ನ ಹಾಗೂ 1 ಬೆಳ್ಳಿಯೊಂದಿಗೆ ಒಟ್ಟು 5 ಪದಕ ಗಳಿಸಿದ್ದರು. ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತದ ಅಥ್ಲೀಟ್ ಒಬ್ಬರ ಅತ್ಯಂತ ಶ್ರೇಷ್ಠ ಪ್ರದರ್ಶನವಿದು. ಸುಮಾರು ಎರಡು ದಶಕಗಳ ಕಾಲ ಭಾರತ ಮತ್ತು ಏಷ್ಯಾ ಅಥ್ಲೆಟಿಕ್ಸ್‌ನ ತಾರೆಯಾಗಿ ಉಷಾ ಮಿಂಚಿದ್ದರು. ಈಗ ‘ಐಒಎ’ ಅಧ್ಯಕ್ಷರಾಗುವ ಮೂಲಕ, 58ನೇ ವಯಸ್ಸಿನಲ್ಲಿ ಉಷಾ ಮತ್ತೊಂದು ಸಾಧನೆಯನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ. ಮಹಾರಾಜ ಯಾದವೀಂದ್ರ ಸಿಂಗ್ ಬಳಿಕ ‘ಐಒಎ’ ಅಧ್ಯಕ್ಷ ಹುದ್ದೆ ವಹಿಸಿಕೊಂಡ ಮೊದಲ ಕ್ರೀಡಾಪಟು ಎಂಬ ಹಿರಿಮೆಯೂ ಅವರದಾಗಿದೆ. ಓಟದ ಅಂಗಳದಲ್ಲಿ ಗೆದ್ದಂತೆ ಆಡಳಿತದ ಅಂಗಳದಲ್ಲೂ ಉಷಾ ಗೆಲ್ಲುತ್ತಾರೆನ್ನುವುದು ಕ್ರೀಡಾಪ್ರೇಮಿಗಳ ನಿರೀಕ್ಷೆ.

## ದೈನ್ಯ ಸ್ಥಿತಿಗೆ ಶ್ರೀಲಂಕಾ

15

**ಸುಮಾರು** 2.2 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಪುಟ್ಟ ದೇಶ ಶ್ರೀಲಂಕಾ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಒಂದು ಕಾಲದಲ್ಲಿ ಮಾದರಿಯಾಗಿದ್ದ ಈ ದೇಶ, ಈಗ ತನ್ನ ತಪ್ಪು ನಡೆಗಳಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಒಂದು ದೇಶ ಹೇಗೆಲ್ಲ ಇರಬಾರದು ಎನ್ನುವುದಕ್ಕೆ ಉದಾಹರಣೆಯಾಗಿದೆ. ದೇಶದಲ್ಲಿನ ಆರ್ಥಿಕ ಸಂಕಷ್ಟ, ಇಂಧನ ಮತ್ತು ಆಹಾರ ಸೇರಿದಂತೆ ಅಗತ್ಯ ವಸ್ತುಗಳ ಅಭಾವ ಹಾಗೂ ರಾಜಕೀಯ ಬಿಕ್ಕಟ್ಟುಗಳು 2022ರಲ್ಲಿ ಶ್ರೀಲಂಕನ್ನರ ಆಕ್ರೋಶ–ಪ್ರತಿಭಟನೆಗೆ ಕಾರಣವಾದವು. ಕೆಲವೆಡೆ ಜನ ದಂಗೆಯೆದ್ದರು. ಹಿಂಸಾಚಾರದಿಂದ ದೇಶ ತತ್ತರಿಸಿತು. ದೇಶದ ಅಧ್ಯಕ್ಷ ಮತ್ತು ಪ್ರಧಾನಿ ನಿವಾಸ ಸೇರಿದಂತೆ ರಾಜಕಾರಣಿಗಳ ಮನೆಗಳ ಮೇಲೆ ಜನ ದಾಳಿ ಮಾಡಿದರು.

50 ಶತಕೋಟಿ ಡಾಲರ್ ಸಾಲದ ಹೊರೆಯಿಂದ ಶ್ರೀಲಂಕಾ ನಲುಗಿದೆ. ಈ ದೇಶದ ರೂಪಾಯಿ ಪಾತಾಳಕ್ಕೆ ಕುಸಿದಿದೆ. ಹಣದುಬ್ಬರ ಪ್ರಮಾಣ ಶೇ. 50ರಷ್ಟಿದೆ. ಪೆಟ್ರೋಲ್, ಡೀಸೆಲ್ ತರಿಸಿಕೊಳ್ಳಲೂ ದೇಶದ ಬಳಿ ಹಣವಿಲ್ಲ. ಎರಡು ಹೊತ್ತಿನ ಊಟವೂ ಅಲ್ಲೀಗ ದುಬಾರಿಯಾಗಿಬಿಟ್ಟಿದೆ. ಮಹಿಂದಾ ರಾಜಪಕ್ಸೆ ಅವರು ಪ್ರಧಾನಿಯಾದ ನಂತರ ಹಾಗೂ ಗೋಟಬಯ ರಾಜಪಕ್ಸೆ ಅಧ್ಯಕ್ಷರಾದ ಮೇಲೆ, ಲಂಕಾದಲ್ಲಿ ರಾಷ್ಟ್ರೀಯವಾದ ಮುನ್ನೆಲೆಗೆ ಬಂತು. ಆರ್ಥಿಕ ಚೇತರಿಕೆಗಿಂತಲೂ ಜನಪ್ರಿಯತೆಗೆ ಇವರು ಒತ್ತು ನೀಡಿದ್ದರು. ತೆರಿಗೆ ಕಡಿತ ಮಾಡಿ ಜನರನ್ನು ಖುಷಿಪಡಿಸಿದರು. ಸಾವಯವ ಬೇಸಾಯಕ್ಕೆ ಒತ್ತು ನೀಡಿ, ಏಕಾಏಕಿ ರಾಸಾಯನಿಕ ಗೊಬ್ಬರವನ್ನೇ ಸಂಪೂರ್ಣ ನಿಷೇಧಿಸಿದ್ದು, ಲಂಕಾವನ್ನು ಕಂಗೆಡಿಸಿತು. ಕೃಷಿ ಮತ್ತು ಪ್ರವಾಸೋದ್ಯಮವನ್ನೇ ನೆಚ್ಚಿಕೊಂಡಿರುವ ಶ್ರೀಲಂಕಾದ ಬಿಕ್ಕಟ್ಟು ಸದ್ಯಕ್ಕೆ ಮುಗಿಯುವಂತೆ ಕಾಣುತ್ತಿಲ್ಲ. ಪ್ರಧಾನಿ ರನಿಲ್ ವಿಕ್ರಮಸಿಂಘೆ ಮತ್ತು ಅಧ್ಯಕ್ಷರಾದ ದಿನೇಶ್ ಗುಣವರ್ಧನ ಅವರ ಮುಂದೆ ಯಾರನ್ನಾದರೂ ಕಂಗೆಡಿಸುವಂತಹ ಸವಾಲುಗಳ ಸರತಿ ಸಾಲೇ ಇದೆ.

## ಸಂಕಷ್ಟದ ಸಮಯದಲ್ಲಿ ರಿಷಿಗೆ ನಾಯಕತ್ವ

16

**ಭಾರತೀಯ** ಮೂಲದ ರಿಷಿ ಸುನಕ್ ಅವರು ಬ್ರಿಟನ್‌ನ ಪ್ರಧಾನಿಯಾದುದು ಭಾರತೀಯರಿಗೂ ಸಂತಸ ತಂದ ಘಟನೆ. ಬೆಂಗಳೂರಿನ ಐಟಿ ಉದ್ಯಮಿ ಎನ್. ಆರ್. ನಾರಾಯಣ ಮೂರ್ತಿ ಮತ್ತು ಸುಧಾ ಮೂರ್ತಿ ಅವರ ಪುತ್ರಿ ಅಕ್ಷತಾ ಮೂರ್ತಿ ಅವರ ಪತಿ ಎನ್ನುವ ನಂಟು ಕೂಡ ರಿಷಿ ಸುನಕ್‌ರ ರಾಜಕೀಯ ಏಳ್ಗೆ ಕನ್ನಡಿಗರ ಗಮನಸೆಳೆಯಲು ಕಾರಣವಾಗಿದೆ. ಕನ್ಸರ್ವೇಟಿವ್ ಪಕ್ಷದ ರಿಷಿ ಈ ಮೊದಲು ಇಂಗ್ಲೆಂಡ್ ರಾಜಕಾರಣದಲ್ಲಿ ಮಹತ್ವದ ಹಲವು ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಪ್ರಸ್ತುತ, ಬ್ರಿಟನ್ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಸಂದರ್ಭದಲ್ಲಿ, ಅ. 25ರಂದು ಪ್ರಧಾನಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ರಿಷಿ ಅವರ ಮುಂದೆ ಹಲವು ಸವಾಲುಗಳಿವೆ. ಆರ್ಥಿಕ ಹಿಂಜರಿತವನ್ನು ನಿಭಾಯಿಸಲು ವಿಫಲರಾದ ಕಾರಣದಿಂದಲೇ, ಬ್ರಿಟನ್‌ನ ನಿಕಟಪೂರ್ವ ಲಿಜ್ ಟ್ರಸ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

